ಇ) ರಾಷ್ಟ್ರೀಯ ಹೆದ್ದಾರಿ–48ರ ಸೋಲೂರು ಗ್ರಾಮದಲ್ಲಿ ನಿಗಮದ ತುಮಕೂರು, ಹಾಸನ, ಚಿಕ್ಕಮಗಳೂರು ವಿಭಾಗಗಳ ಘಟಕಗಳಿಂದ ಕಾರ್ಯಚರಣೆ ಮಾಡುವ ವಾಹನಗಳಿಗೆ ನಿಲುಗಡೆ ನೀಡಿ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿ ಕಾರ್ಯಚರಣೆ ಮಾಡಲಾಗುತ್ತಿದೆ.

ಮುಂದುವರೆದು, ಹಾಸನ ವಿಭಾಗದ ವಿವಿಧ ಘಟಕಗಳಿಂದ ಬೆಂಗಳೂರಿಗೆ ಹೋಗುವಾಗ ಹಾಗೂ ವಾಪಸ್ ಬರುವ ವಾಹನಗಳಿಗೆ (ಪ್ರತಿಷ್ಠಿತ, ಅಂತರರಾಜ್ಯ, ತಡೆರಹಿತ & ನಿಗಧಿತ ನಿಲುಗಡೆ ಸಾರಿಗೆಗಳನ್ನು ಹೊರತುಪಡಿಸಿ) **ಸೋಲೂರು** ಗ್ರಾಮದಲ್ಲಿ ಕಡ್ಡಾಯವಾಗಿ ನಿಲುಗಡೆ ನೀಡಲು ಕ್ರಮ ಕೈಗೊಳ್ಳಲಾಗುವುದು.

ಹೊಸ ಬಸ್ಸುಗಳು

844(1171); ಶ್ರೀ ಬಣಕಾರ್ ಯು.ಬಿ (ಹಿರೇಕೆರೂರು)

ಅ) 2013–14 ನೇ ಸಾಲಿನಲ್ಲಿ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಿಂದ ಡಿಪೋಗಳಿಗೆ ನೀಡಿದ ಹೊಸ ಬಸ್ಸುಗಳ ಸಂಖ್ಯೆ ಎಷ್ಟು?

ಆ) ಹಿರೇಕೆರೂರು ಘಟಕದಲ್ಲಿ ಬಸ್‌ಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹೊಸ ಬಸ್‌ಗಳನ್ನು ಪೂರೈಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) 2013–14 ನೇ ಸಾಲಿನಲ್ಲಿ 48 ಘಟಕಗಳಿಗೆ ಒಟ್ಟು 353 ಹೊಸ ಬಸ್ಸುಗಳನ್ನು ನೀಡಿದೆ.

ಆ) ಹೌದು

ಇ) 2013–14 ನೇ ಸಾಲಿನ ಕಾರ್ಯ ಯೋಜನೆಯನ್ವಯ ಹಿರೇಕೆರೂರು ಘಟಕಕ್ಕೆ ಒಟ್ಟು 9 ಹೊಸ ವಾಹನಗಳನ್ನು ಒದಗಿಸಬೇಕಿದ್ದು,

ಇಲ್ಲಿಯವರೆಗೆ 5 ವಾಹನಗಳನ್ನು ನೀಡಲಾಗಿದೆ. ಮಿಕ್ಕ ವಾಹನಗಳನ್ನು ಮಾರ್ಚ್–14 ರ ಅಂತ್ಯದೊಳಗಾಗಿ ಒದಗಿಸಲಾಗುವುದು. ಅಲ್ಲದೇ 2014–15 ನೇ ಸಾಲಿನಲ್ಲಿ ಗ್ರಾಮಾಂತರ ಸಾರಿಗೆಯ ಜೊತೆಗೆ ನಗರ ಸಾರಿಗೆ ವಾಹನಗಳನ್ನು ಪೂರೈಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ಹೊಸ ಪಡಿತರ ಚೀಟಿ

845(1172); ಶ್ರೀ ಬಣಕಾರ್ ಯು.ಬಿ (ಹಿರೇಕೆರೂರು)

ಅ) ಹಿರೇಕೆರೂರು ತಾಲ್ಲೂಕಿನಲ್ಲಿ ಇದುವರೆವಿಗೂ ಹೊಸ ಪಡಿತರ ಕಾರ್ಡುಗಳ ವಿತರಣೆಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ವಿತರಣೆಗೆ ಸರ್ಕಾರ ಕ್ರಮಕೈಗೊಳ್ಳುವುದೆ;

ಇ) ಹೊಸ ಪಡಿತರ ಚೀಟಿಗಳಿಗೆ ಅನುಗುಣವಾಗಿ ನ್ಯಾಯಬೆಲೆ ಅಂಗಡಿ ಸ್ಥಾಪನೆಗೆ ಸರ್ಕಾರ ರೂಪಿಸಿರುವ ನಿಯಮಾವಳಿಗಳೇನು (ವಿವರಗಳನ್ನೊದಗಿಸುವುದು)

ಶ್ರೀ ದಿನೇಶ್ ಗುಂಡೂರಾವ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ರಾಜ್ಯ ಸಚಿವರು)

ಅ) ಹೌದು,

ಆ) ಪಡಿತರ ಚೀಟಿಗಾಗಿ ಬಂದ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಕುಟುಂಬಗಳಿಗೆ ಪಡಿತರ ಚೀಟಿ ವಿತರಿಸಲು ಶೀಘ್ರ ಕ್ರಮವಹಿಸಲಾಗುತ್ತಿದೆ. ವಿವರಗಳನ್ನು ಈ ಕೆಳಗೆ ನಮೂದಿಸಲಾಗಿದೆ.